

# ಹಳೆಯ ವಸ್ತುಗಳಿಗೆ ನವರೂಪ

**ಬಿಡುವಿನ ವೇಳೆ ಕಳೆಯಲು ಕಸೂತಿ, ಕರಕುಶಲ ವಸ್ತುಗಳ ತಯಾರಿಕೆ, ಎಂಬ್ರಾಯಿಡರಿ ಮುಂತಾದ ಕಲೆಗಾರಿಕೆಯುಳ್ಳ ಕೆಲಸದಲ್ಲಿ ಮಹಿಳೆಯರು ತೊಡಗಿಕೊಳ್ಳುವರು. ಮಂಗಳೂರು ಸಮೀಪದ ಕಿನ್ನಿಗೋಳಿಯಲ್ಲಿರುವ ಸುಮತಿ ಶೆಟ್ಟಿ ಕಸದಿಂದ ನವನವೀನ ವಸ್ತುಗಳನ್ನು ತಯಾರಿಸಿ ಗಮನಸೆಳೆಯುತ್ತಿದ್ದಾರೆ.**

■ ವಿ.ಎಸ್. ನಾಯಕ, ಬಳಕೂರು

ಸೃಜನಾತ್ಮಕ ಮನಸ್ಸು, ಆಸಕ್ತಿ, ಕೌಶಲ, ಕಲೆಯ ಅಭಿವ್ಯಕ್ತಿಗೆ ಅಗತ್ಯವಾಗಿ ಬೇಕು. ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಅಗಾಧವಾದ ಆಸಕ್ತಿ ಜೊತೆಗೆ ಕಲೆಗಾರಿಕೆ ಇದ್ದರೆ ಕಸವೆಂದು ಎಸೆಯುವ ನಿರುಪಯುಕ್ತ ವಸ್ತುಗಳು ನವನವೀನ ರೂಪ ತಳೆದು ಆಕರ್ಷಕವಾಗಿ ಕಾಣಬಹುದು. ಮನೆಯ ಒಳಾಂಗಣ ಅಲಂಕಾರಕ್ಕೆ ಉಪಯೋಗಕ್ಕೆ ಬರುವ ಇಂಥ ಕರಕುಶಲ ವಸ್ತುಗಳು ನೋಡುಗರ ಗಮನ ಸೆಳೆಯುವುದರಲ್ಲಿ ಸಂಶಯವೇ ಇಲ್ಲ.

ಬಣ್ಣಗಳನ್ನು ಬಳಿದುಕೊಂಡು ಮದುಮಗಳಂತೆ ಸಿಂಗಾರಗೊಂಡ ಹಳೆಯ ಮಣ್ಣಿನ ಪಾತ್ರೆಗಳು ಹೂದೋಟದ ಮಧ್ಯೆ ಕಂಗೊಳಿಸಿದರೆ ಅಲ್ಲಿ ಅದ್ಭುತ ಲೋಕವೇ ಸೃಷ್ಟಿಯಾಗುತ್ತದೆ. ಬಣ್ಣ ಬಣ್ಣದ ಕಲಾಕೃತಿಗಳು ಅಚ್ಚರಿಯ ತಾಣವಾಗಿ ರೂಪುಗೊಂಡು ಕಲಾ ಪ್ರಪಂಚವೇ ಧರೆಗಿಳಿದು ಬಂದಂತೆ ಭಾಸವಾಗುತ್ತದೆ. ಕೋಳಿ ಮೊಟ್ಟೆಯ ಹೊರ ಕವಚ, ಹಳೆಯ ಬಾಟಲಿಗಳು, ಹತ್ತಿಯ ಕೋಡುಗಳು, ಒಣಗಿದ ಹಳೆಯ ಮರದ ಪರಿಕರಗಳು, ಹಳೆಯ ಹೆಂಚುಗಳು, ಇವುಗಳಿಗೆಲ್ಲ ನವರೂಪ, ನವಭಾವ ನೀಡಿದರೆ ಅದು ನಿಜವಾಗಿಯೂ ನಿರುಪಯೋಗಿ ವಸ್ತುಗಳೇ ಎಂಬ ಕಲ್ಪನೆ ಕೂಡ ಬರಲಿಕ್ಕಿಲ್ಲ. ಇಂಥ ಅದ್ಭುತ ಕಲಾಕೃತಿಗಳನ್ನು ತಯಾರಿಸಿ ಹೊಸ ಕಲಾಲೋಕವನ್ನು ಸೃಷ್ಟಿಸಿದವರು ಮಂಗಳೂರು ಸಮೀಪದ ಕಿನ್ನಿಗೋಳಿಯಲ್ಲಿರುವ ಸುಮತಿ ಶೆಟ್ಟಿ.

## ಕಸದಿಂದ ರಸದ ಕಲ್ಪನೆ

ಸುಮತಿ ಅವರ ಮನೆಗೆ ಭೇಟಿ ಕೊಟ್ಟವರಿಗೆ ಇದು ಕಲಾಗ್ಯಾಲರಿಯೋ ಕಲಾತಾಣವೋ ಎಂಬ ಅನುಮಾನ ಮನದಂಚಿನಲ್ಲಿ ಮೂಡಿ ಮರೆಯಾಗುವುದು ಸಹಜ. ಒಂದು ಕ್ಷಣ ಕುಳಿತು ಇಲ್ಲಿ ಅರಳಿ ನಿಂತ ಕಲಾಕೃತಿಗಳನ್ನು ವೀಕ್ಷಿಸಿ ಕಣ್ತುಂಬಿಕೊಂಡರೆ ಮನಸ್ಸಿಗೂ ಸಮಾಧಾನವಾಗುತ್ತದೆ. ಇಲ್ಲಿಯ ವರ್ಣಮಯ ಕಲಾಮಯ ವಾತಾವರಣ, ಬಂದ ಪ್ರವಾಸಿಗರ, ಆಸಕ್ತರ ಮನವು ಪುಳಕವಾಗಿ ಒಂದು ಕ್ಷಣ ಮೂಕವಿಸ್ಮಿತರನ್ನಾಗಿಸುತ್ತದೆ. ಒಂದು ಮನೆಯ ಅಂದವನ್ನು ಹೀಗೂ ಹೆಚ್ಚಿಸಬಹುದು. ಎನ್ನುವುದಕ್ಕೆ ಕಲಾತ್ಮಕತೆ, ಜಾಣ್ಮೆಯಿದ್ದರೆ ಕಡಿಮೆ ಖರ್ಚಿನಲ್ಲಿ ಅತ್ಯಂತ ಮೆರಗು ತರಬಹುದು. ಎಂಬುದಕ್ಕೆ ಇಲ್ಲಿನ